# ಗಾಂಧಿ ಪ್ರತಿಮೆಗೆ ಪೂಜೆ

ದಕ್ಷಿಣ ಕನ್ನಡ ಜಿಲ್ಲೆಯ ಕಂಕನಾಡಿಯ ಬ್ರಹ್ಮಬೈದರ್ಕಳ ಗರೋಡಿ ತುಳುನಾಡ ವೀರ ಪುರುಷರಾದ ಕೋಟಿ ಚೆನ್ನಯ್ಯ ಸಹೋದರರನ್ನು ಆರಾಧಿಸುವ ಕ್ಷೇತ್ರ. ಇಲ್ಲಿ ಸಂತ, ಗುರು, ಕವಿ, ಸಾಮಾಜಿಕ ಚಳವಳಿಗಾರರಾಗಿದ್ದ ಶ್ರೀ ನಾರಾಯಣ ಗುರುಗಳ ಮೂರ್ತಿಗೆ ಪೂಜೆ ಸಲ್ಲಿಸಲಾಗುತ್ತದೆ. ಈ ಗರೋಡಿಯ ಇನ್ನೊಂದು ವಿಶೇಷತೆ ಎಂದರೆ ರಾಷ್ಟ್ರಪಿತ ಗಾಂಧೀಜಿಯವರ ಮೂರ್ತಿ ಪೂಜೆ. 1948ರ ಡಿಸೆಂಬರ್ 15 ರಂದು ಮೊದಲು ಮಣ್ಣಿನಿಂದ ಮಾಡಿದ ಪ್ರತಿಮೆ ಸ್ಥಾಪಿಸಲಾಗಿತ್ತು. ಮುಂದೆ 2011ರಲ್ಲಿ ಬಿಳಿ ಅಮೃತಶಿಲೆಯಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಪ್ರತಿದಿನ ಬೆಳಿಗ್ಗೆ, ಅಪರಾಹ್ನ ಮತ್ತು ಸಂಜೆ ಪೂಜೆ ಮಾಡಲಾಗುತ್ತದೆ. ಪ್ರತಿ ದಿನ ಒಂದು ದೀಪ ಹಚ್ಚಿ ಗಾಂಧೀಜಿ ಪ್ರತಿಮೆಗೆ ಹೂ ಸಲ್ಲಿಸಿ ಗೌರವ ಪೂಜೆ ನಡೆಸಲಾಗುತ್ತದೆ. ಪ್ರತಿ ವರ್ಷ ಅಕ್ಟೋಬರ್ 2 ರಂದು ವಿಶೇಷ ಪೂಜೆ ಜರುಗಿಸಲಾಗುವುದು ಮತ್ತು ಸ್ವಾತಂತ್ರ್ಯ ದಿನದಂದು ಸಾಮಾನ್ಯ ಪೂಜೆ ಇದೆ. ಭಾರತದ ಸ್ವಾತಂತ್ರ್ಯಕ್ಕಾಗಿ ನಾಯಕತ್ವ ವಹಿಸಿದ ಮಹಾತ್ಮಾ ಗಾಂಧೀಜಿಯವರನ್ನು ನಿತ್ಯವೂ ನೆನೆಯುವುದು, ಗೌರವಿಸುವುದು ಶ್ರೇಷ್ಠ ಸಂಗತಿಯಲ್ಲವೆ?

**-ಎಸ್. ಜಯಶ್ರೀ ಶೆಣೈ, ಬಂಟ್ವಾಳ**





# ಆಳೆತ್ತರದ ನಂದಿ!

ಬಳ್ಳಾರಿ ಜಿಲ್ಲೆ ತುಂಗಭದ್ರಾ ನದಿ ದಂಡೆಯ ಕುರುವತ್ತಿ ಬಸವಣ್ಣನ ಕ್ಷೇತ್ರವೆಂದೇ ಪ್ರಸಿದ್ಧಿ ಪಡೆದಿದೆ. ಇಲ್ಲಿ ವಿಜಯನಗರ ಶೈಲಿಯ ಮಲ್ಲಿಕಾರ್ಜುನ ದೇವಾಲಯವಿದೆ. ಹೋರಿಯೊಂದು ಶಿವನನ್ನು ಹುಡುಕುತ್ತ ನದಿ ದಂಡೆಗೆ ಬಂದಿತೆಂದೂ, ಅಲ್ಲಿಯೇ ಶಿವನನ್ನು ಕಂಡು ಪ್ರಾರ್ಥಿಸುತ್ತ ಕುಳಿತಿತ್ತೆಂದೂ ಹೇಳುತ್ತಾರೆ. ಮಂಡಿಕಾಲೂರಿ ಕುಳಿತಿರುವ ಈ ನಂದಿ ತುಂಬ ಆಕರ್ಷಕವಾಗಿದೆ. ಇದು 10 ಅಡಿ ಉದ್ದ, 9 ಅಡಿ ಎತ್ತರವಾಗಿದೆ.

**-ಪ್ರಕಾಶ್ ಎಸ್. ಮನ್ನಂಗಿ ಹಾವೇರಿ**

# ಬಟ್ಟೆಯಾರತಿ

ಕಾರ್ತೀಕ ಮಾಸದಲ್ಲಿ ದೀಪದಾರತಿ ಶ್ರೇಷ್ಠವೆನಿಸಿದೆ. ಈಶ್ವರ ದೇವಾಲಯಗಳಲ್ಲಿ ದೀಪಗಳು ವಿಜೃಂಭಿಸುತ್ತದೆ. ನರಸಿಂಹರಾಜಪುರದ ಉಮಾಮಹೇಶ್ವರ ದೇವಸ್ಥಾನದಲ್ಲೂ ವಿಶೇಷ ರೀತಿಯ ಆರತಿ ಸಂಪ್ರದಾಯವಿದೆ. ಎಣ್ಣೆಯಲ್ಲಿ ಅದ್ದಿದ ಪಂಚೆಯನ್ನು ಪೂಜೆ ಮಾಡಿದ ಆರತಿ ತಟ್ಟೆಗೆ ಹಿಡಿದು ಅದು ಹೊತ್ತಿಕೊಂಡ ಮೇಲೆ ದೇವರಿಗೆ ಅಭಿಮುಖವಾಗಿ ಹಿಡಿಯುವರು. ಹಾಗೆ ಹಿಡಿದಾಗ ಪಂಚೆ ಉರಿದು ಭಸ್ಮ ಲೇಪನಗೊಳ್ಳುವುದು. ಅದನ್ನು ಭಕ್ತಾದಿಗಳು ಹಣೆಗೆ ಇಟ್ಟುಕೊಳ್ಳುವರು. ಚಿಕ್ಕಮಗಳೂರು ದೇವಿರಮ್ಮನ ಬೆಟ್ಟದಲ್ಲಿ ಬೆಣ್ಣೆ ಬಟ್ಟೆ ಅರ್ಪಣೆ ಇದೆ.

**-ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ**

